ದಿನಾಂಕ 18-5-83ರಂದು ಗುಲ್ಬರ್ಗಾದಲ್ಲಿ ಜರುಗಿದ ಜಿಲ್ಲಾ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಈ ಗ್ರಾಮಕ್ಕೆ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯನ್ನು ಅಭಿವೃದ್ಧಿ ಮಾಡುವ ಪ್ರಸ್ತಾಪವನ್ನು ಅನುಮೋದಿಸಲಾಗಿದೆ.

ಈ) ಈ ಅಭಿವೃದ್ಧಿಯ ಯೋಜನೆಯ ಅಂದಾಜು ವೆಚ್ಚವು ಸುಮಾರು 2.00 ಲಕ್ಷ ರೂ.ಗಳು.

ಉ) 1983-84ರ ಸಾಲಿನಲ್ಲಿ ಹೊಸ ಯೋಜನೆಗಳನ್ನು ತೆಗೆದುಕೊಳ್ಳುವ ಬಗ್ಗೆ ಹಾಗೂ ಅಂತಹ ಯೋಜನೆಗಾಗಿ ಹಣವನ್ನು ಒದಗಿಸುವ ಬಗ್ಗೆ ಪ್ರಸ್ತಾಪವು ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ.ಬಿ. ಶಾನಪ್ಪ.— ನಾಲ್ವಾರ ಗ್ರಾಮಕ್ಕೆ ಕುಡಿಯುವ ನೀರನ್ನು ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯ ಮೂಲಕ ಒದಗಿಸಲು ಕೈಗೊಂಡಿರುವ ಅಂದಾಜು ವೆಚ್ಚ ಎಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್.— ಎರಡು ಲಕ್ಷ ರೂಪಾಯಿಗಳೆಂದು ಈಗಾಗಲೇ ಹೇಳಿದ್ದೇನೆ. ಈ ಗ್ರಾಮದಲ್ಲಿ ತೋಡು ಬಾವಿ ಇದೆ, ಆದರೆ ಜನಸಂಖ್ಯೆ ಹೆಚ್ಚಿರುವುದರಿಂದ ಈ ಬಾವಿಯ ನೀರು ಸಾಕಾಗುತ್ತಾ ಇಲ್ಲ. ಆದಕ್ಕಾಗಿಯೇ ಎರಡು ಲಕ್ಷ ರೂಪಾಯಿಗಳ ಹೊಸ ಯೋಜನೆಯನ್ನು ಕೈಗೊಳ್ಳಲಾಗಿದೆ. ಈಗಾಗಲೇ ಅಲ್ಲಿ ನಾಲ್ಕು ಕೊಳವೆ ಬಾವಿಗಳನ್ನು ತೆಗೆಸಲಾಗಿದ್ದು ಅವುಗಳ ಪೈಕಿ ಎರಡರಲ್ಲಿ ನೀರು ಬರುತ್ತಾ ಇಲ್ಲ. ಇನ್ನೆರಡರ ಪೈಕಿ ಒಂದರಲ್ಲಿ 4 ಸಾವಿರ ಲೀಟರ್ ನೀರು ಬಂದರೆ ಮತ್ತೊಂದರಲ್ಲಿ ನಾಲ್ಕುನೂರರಿಂದ ಆರುನೂರು ಲೀಟರ್ ನೀರು ಬರುತ್ತಾ ಇದೆ. ಈ ನೀರು ಸಾಲುವುದಿಲ್ಲ ಎಂಬ ಕಾರಣದಿಂದ 1983-84ರಲ್ಲಿ ಹೊಸ ಯೋಜನೆಯನ್ನು ಕೈಗೊಳ್ಳಬೇಕೆಂದಿದ್ದೇವೆ.

ಶ್ರೀ ಕೆ.ಬಿ. ಶಾನಪ್ಪ.— ಈ ಹೊಸ ಯೋಜನೆಗೆ 10ಲಕ್ಷ ರೂಪಾಯಿಗಳು ವೆಚ್ಚವಾಗುತ್ತವೆಂದು ನಾನು ಕೇಳಿದ್ದೇನೆ. ಇಷ್ಟು ವೆಚ್ಚವಾದರೂ ಕೂಡ ಈ ಯೋಜನೆಯನ್ನು ಮಂಜೂರ್ಮಾಡುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್.— ಈಗ 2 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಈ ಯೋಜನೆ ಮಂಜೂರಾಗಿದೆ. ಮಾನ್ಯ ಸದಸ್ಯರು 10 ಲಕ್ಷ ರೂಪಾಯಿ ಎಂದು ಹೇಳುತ್ತಿದ್ದಾರೆ. ಅಷ್ಟು ಹಣದ ಅಗತ್ಯ ಇದ್ದರೆ ಅದನ್ನು ಮಂಜೂರು ಮಾಡಿಸಿಕೊಡುತ್ತೇನೆ.

ಶ್ರೀ ಕೆ.ಬಿ. ಶಾನಪ್ಪ.— ಈ ಯೋಜನೆಯನ್ನು 1983-84ರಲ್ಲಿಯೇ ಪ್ರಾರಂಭ ಮಾಡುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್.— 1983.84ರಲ್ಲಿ ನಮ್ಮ ಸರ್ಕಾರ ಹೊಸ ಯೋಜನೆಗಳಿಗೆ ಮಂಜೂರಾತಿ ಕೊಟ್ಟಿಲ್ಲ. ಆದ್ದರಿಂದ ಈ ಯೋಜನೆಯನ್ನು 1984-85ರ ಏಪ್ರಿಲ್‌ನಲ್ಲಿ ಪ್ರಾರಂಭ ಮಾಡುತ್ತೇವೆ.

ವಿಷಯ : ಬಿತ್ತನೆ ಬೀಜಗಳ ಖರೀದಿ ಮತ್ತು ಮಾರಾಟ ಬೆಲೆಯನ್ನು ಕಡಿಮೆಗೊಳಿಸುವ ಬಗ್ಗೆ

ಪ್ರಶ್ನೆ : 188(311) ಶ್ರೀ ಆರ್.ವಿ. ಪಾಟೀಲ್ (ಪರತಗಡ) ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕರ್ನಾಟಕ ರಾಜ್ಯ ಬೀಜ ನಿಗಮ, ಬೆಂಗಳೂರು ಇವರು ವರಲಕ್ಷ್ಮೀ ಜಯಲಕ್ಷ್ಮೀ ಬಿ.ಎಸ್.ಹೆಚ್.-1 (ವಾಣಿಜ್ಯ ಬೀಜ) ಟಿ.ಎಂ.ವಿ-2, ಜೆ.ಎಲ್-24 ಬೀಜಗಳನ್ನು ರೈತರಿಂದ ಖರೀದಿಸುವರೇ ;

ಆ) ಹಾಗಿದ್ದಲ್ಲಿ ಪ್ರತಿಯೊಂದು ವರ್ಗದ ಬೀಜಗಳಿಗೆ ನಿಗದಿ ಪಡಿಸಿದ ದರಗಳೇನು ?

ಇ) ಮೇಲೆ ಹೇಳಿದ ಬೀಜಗಳ ಮಾರಾಟದ ಬೆಲೆಗಳೇನು ;

ಈ) ಬೇಸಾಯಕ್ಕೆ ಬೇಕಾದ ಬಿತ್ತನೆ ಬೀಜಗಳ ಖರೀದಿ ಹಾಗೂ ಮಾರಾಟ ದರದಲ್ಲಿ ಹೆಚ್ಚಿನ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ರೈತರಿಗೆ ವಿವಿಧ ಬಿತ್ತನೆ ಬೀಜಗಳ ಮಾರಾಟ ಬೆಲೆಯನ್ನು ಕಡಿಮೆ ಮಾಡಲು ಸರ್ಕಾರವು ಪರಿಗಣಿಸುತ್ತದೆಯೇ?

ಉತ್ತರ : ಶ್ರೀ ಬಿ.ಎಲ್. ಗೌಡ (ಕೃಷಿ ಸಚಿವರು).— ಕರ್ನಾಟಕ ರಾಜ್ಯ ಬೀಜ ನಿಗಮದವರು ಬಿಎಸ್‌ಎಚ್-1 (ವಾಣಿಜ್ಯ ಬೀಜವನ್ನು ಬಿಟ್ಟು ವರಲಕ್ಷ್ಮಿ, ಜಯಲಕ್ಷ್ಮಿ (ಡಿಸಿಎಚ್-32) ಟಿಎಂವಿ-2 ಮತ್ತು ಜೆ-ಎಲ್-24 ಬೀಜವನ್ನು ನೋಂದಾಯಿಸಿದ ಬೀಜೋತ್ಪಾದಕರಿಂದ ಖರೀದಿಸುವರು ಹೆಚ್ಚಿನ ಬೇಡಿಕೆಯನ್ನು ಕೃಷಿ ನಿರ್ದೇಶಕರು ಗುರುತಿಸಲ್ಪಟ್ಟ ಬೀಜೋತ್ಪಾದಕರಿಂದ ಖರೀದಿಸುವರು.

ಅ) **ಪ್ರಮಾಣಿತ ಬೀಜ ಚೀಟಿ ಅಂಟಿಸಿದ ನಿಜ ಬೀಜ ಪ್ರತಿ ಕ್ವಿಂಟಾಲಿಗೆ**

ವರಲಕ್ಷ್ಮಿ	5500 ರೂಪಾಯಿ	— —
ಜಯಲಕ್ಷ್ಮಿ	6500 ರೂಪಾಯಿ	— —
ಟಿಎಂವಿ 2	550 ರೂಪಾಯಿ	500 ರೂಪಾಯಿ
ಜೆ ಎಲ್-24	—	550 ರಿಂದ 600 ರೂಪಾಯಿ

ಇ) ವರಲಕ್ಷ್ಮಿ, ಜಯಲಕ್ಷ್ಮಿ (ಡಿಸಿಎಚ್-32) ಮಾರಾಟ ದರವನ್ನಿನ್ನೂ ನಿಗದಿಪಡಿಸಿಲ್ಲ.

ಟಿಎಂವಿ 2	ಪ್ರಮಾಣೀತ ಬೀಜಕ್ಕೆ–ಕ್ವಿಂಟಾಲಿಗೆ 600 ರೂಪಾಯಿ
	ಚೀಟಿ ಅಂಟಿಸಿದ ನಿಜ ಬೀಜಕ್ಕೆ — ಕ್ವಿಂಟಾಲಿಗೆ 550 ರೂಪಾಯಿ.
ಜೆಎಲ್-24	ಚೀಟಿ ಅಂಟಿಸಿದ ನಿಜ ಬೀಜಕ್ಕೆ — ಕ್ವಿಂಟಾಲಿಗೆ 625 ರಿಂದ 640 ರೂಪಾಯಿ.

ಈ) ನಿರ್ವಹಣೆ ವೆಚ್ಚವು ಪ್ರತಿ ಕ್ವಿಂಟಾಲಿಗೆ 50 ರಿಂದ 90 ರೂಪಾಯಿ ಇರುವುದರಿಂದ ವ್ಯತ್ಯಾಸ ಸೂಕ್ತವಾಗಿದೆ.

ಉ) ಸದ್ಯಕ್ಕೆ ಇದು ಪರಿಶೀಲನೆಯಲ್ಲಿಲ್ಲ.

ಶ್ರೀ ಆರ್.ವಿ. ಪಾಟೀಲ್.— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ವರಲಕ್ಷ್ಮಿ ಬೀಜಕ್ಕೆ 5500 ರೂಪಾಯಿಗಳು ಮತ್ತು ಜಯಲಕ್ಷ್ಮಿ ಬೀಜಕ್ಕೆ 6500 ರೂಪಾಯಿಗಳೆಂದು ತಿಳಿಸಿದ್ದಾರೆ. ಆದರೆ ಮಾರಾಟ ಮಾಡುವಾಗ ಒಂದು ಕೆ ಜಿ. ಬೀಜಕ್ಕೆ ಸುಮಾರು 125 ರೂಪಾಯಿ ಗಳನ್ನು ಹೊರಗಡೆಯವರು ತೆಗೆದುಕೊಳ್ಳುತ್ತಿದ್ದಾರೆ. ಆದರೆ ತಾವು ಖರೀದಿ ಮಾಡುವುದು ಕೇವಲ 65ರೂಪಾಯಿಗಳಿಗೆ ಮಾತ್ರ. ಇದರಿಂದ ಒಂದು ಕ್ವಿಂಟಾಲ್‌ಗೆ ಸುಮಾರು 50 ರೂಪಾಯಿಗಳಿಂದ 90 ರೂಪಾಯಿಗಳ ವ್ಯತ್ಯಾಸ ಬರುತ್ತದೆ. ಈ ರೀತಿಯ ತಾರತಮ್ಯವನ್ನು ತಾವು ಏತಕ್ಕೆ ಮಾಡುತ್ತೀರಿ?

ಶ್ರೀ ಬಿ.ಎಲ್. ಗೌಡ.— ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದವರು ವರಲಕ್ಷಿ ಬೀಜಗಳನ್ನು 68 ರೂಪಾಯಿಗಳಿಗೂ ಜಯಲಕ್ಷ್ಮಿ ಬೀಜಗಳನ್ನು 85ರೂಪಾಯಿಗಳಿಗೂ ಖರೀದಿ ಮಾಡುವಂತೆ ನಿಗದಿ ಮಾಡಿದ್ದಾರೆ. ಆ ರೀತಿ ಏನಾದರೂ ವ್ಯತ್ಯಾಸವಾಗಿರುವುದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಆಗ ನಾನು ಅಂಥವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್ ವಿ. ಪಾಟೀಲ್.— ಸ್ವಾಮಿ, ತಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿಯೇ ಮಾರಾಟ ಮಾಡಿದ್ದಾರೆ. ಮತ್ತೆ ನರಗುಂದ ಮತ್ತು ನವಲಗುಂದಗಳ ಬೀಜ ಮಾರಾಟ ಕೇಂದ್ರಗಳಲ್ಲಿ ಕೂಡ ಮಾರಾಟ ಮಾಡಿದ್ದಾರೆ. ಆದ್ದರಿಂದ ತಾವು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಮಾತ್ರ ಬೀಜಗಳನ್ನು ಕೊಂಡುಕೊಳ್ಳುವ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು.

ಶ್ರೀ ಬಿ ಎಲ್. ಗೌಡ .— ಸ್ವಾಮಿ, ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿ ಮಾರಾಟ ಮಳಿಗೆ ಗಳನ್ನು ಮಾಡುವುದು ಸರ್ಕಾರಕ್ಕೆ ಸಧ್ಯದ ಪರಿಸ್ಥಿತಿಯಲ್ಲಿ ಕಷ್ಟವಾಗುತ್ತದೆ. ಮತ್ತೆ ಈಗ ನಾವು ಎರಡು ಮತ್ತು ಮೂರು ತಾಲ್ಲೂಕುಗಳನ್ನು ಸೇರಿಸಿ ಒಂದು ಕೇಂದ್ರವನ್ನಾಗಿ ಮಾಡಿದ್ದೇವೆ. ಅಲ್ಲಿ ರೈತರು ತಮಗೆ ಬೇಕಾದ ಸೌಲಭ್ಯವನ್ನು ಪಡೆದುಕೊಳ್ಳಬಹುದು,

ಶ್ರೀ ಆರ್. ವಿ. ಪಾಟೀಲ್ .— ಸ್ವಾಮಿ, ಮಹಾರಾಷ್ಟ್ರ ಮತ್ತು ತಮಿಳುನಾಡು ಇತ್ಯಾದಿ ಕಡೆ ಗಳಲ್ಲಿ ರೈತರು ಬೀಜಗಳನ್ನು ಉತ್ಪತ್ತಿ ಮಾಡಿ ಅದೇ ಬೀಜಗಳನ್ನು ಸರ್ಕಾರದವರು ಕೊಂಡುಕೊಂಡು ಮತ್ತೆ ರೈತರಿಗೆ ವಿತರಣೆ ಮಾಡುವಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಆ ರೀತಿಯ ವ್ಯವಸ್ಥೆಯನ್ನು ತಾವು ಏತಕ್ಕೆ ಕಡಿಮೆ ವೆಚ್ಚದಲ್ಲಿ ಮಾಡಬಾರದು ?

ಶ್ರೀ ಬಿ. ಎಲ್. ಗೌಡ .— ಸ್ವಾಮಿ, ನಮ್ಮ ಕರ್ನಾಟಕ ರಾಜ್ಯದಲ್ಲಿ ಈಗ ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ವತಿಯಿಂದ ಮತ್ತು ನ್ಯಾಷನಲ್ ಸೀಡ್ಸ್ ಕಾರ್ಪೊರೇಷನ್‌ನಿಂದ ನಡೆಸುತ್ತಿದ್ದೇವೆ. ಈಗ ನಾವು ಬೇರೆ ರಾಜ್ಯಗಳಿಗಿಂತ ಕೇವಲ 10 ರೂಪಾಯಿಗಳನ್ನು ಜಾಸ್ತಿ ಇಟ್ಟುಕೊಂಡಿದ್ದೇವೆ.

ಶ್ರೀ ಬಿ. ಆರ್. ಯಾವಗಲ್ .— ಸ್ವಾಮಿ, ನಮ್ಮ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ ಪ್ರಕಾರ ಜಯಲಕ್ಷ್ಮಿ ಬೀಜಗಳಿಗೆ ಸುಮಾರು 85 ರೂಪಾಯಿಗಳನ್ನು ನಿಗದಿ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಹೋದ ವರ್ಷ 125 ರೂಪಾಯಿಗಳಂತೆ ಬೇರೆ ಕಡೆಯಿಂದ ಮಾರಾಟ ಮಾಡಿದ್ದಾರೆ. ಈ ರೀತಿಯ ತಾರತಮ್ಯವನ್ನು ಏತಕ್ಕೆ ಮಾಡುತ್ತೀರಿ ?

ಶ್ರೀ ಬಿ. ಎಲ್. ಗೌಡ .— ಸ್ವಾಮಿ, ಈ ಪ್ರಶ್ನೆಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ನಿರ್ದಿಷ್ಟ ವಾದ ಯಾವುದಾದರೂ ಮಾಹಿತಿಗಳು ಇದ್ದರೆ ಅದನ್ನು ಮಾನ್ಯ ಸದಸ್ಯರು ಒದಗಿಸಿಕೊಟ್ಟರೆ ನಾನು ಅಂಥವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಚನ್ನಬಸವನಗೌಡ .— ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಕಡೆ ಡಿ. ಸಿ. ಎಸ್. 32 ಹತ್ತಿ ಉತ್ಪಾದನೆಯನ್ನು ಮಾಡುತ್ತಿದ್ದಾರೆ ಸರ್ಕಾರದವರು ಈ ಹತ್ತಿಗೆ ದರವನ್ನು ನಿಗದಿ ಮಾಡಿ ಹತ್ತಿ ಯನ್ನು ಸಂಗ್ರಹಿಸಿ ಇಡುತ್ತೀರಾ ಮತ್ತು ಇದಕ್ಕೆ ಸರಿಯಾದ ಬೆಲೆಯನ್ನು ನಿಗದಿ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ .— ಸ್ವಾಮಿ, ಕಳೆದ ಮೂರು ವರ್ಷದಿಂದ ನಾವು ಹತ್ತಿ ಬೀಜಗಳನ್ನು ಉತ್ಪಾದನೆ ಮಾಡಿದ್ದನ್ನು ಖರೀದಿ ಮಾಡಿಕೊಳ್ಳುತ್ತಿದ್ದೇವೆ. ಆದರೆ ಈ ಸಾರಿ ಇನ್ನೂ ಖರೀದಿಮಾಡಿಲ್ಲ. ಮತ್ತು ಬೆಲೆಯನ್ನೂ ನಿಗದಿ ಮಾಡಿಲ್ಲ. ಬೆಲೆಯನ್ನು ನಿಗದಿ ಮಾಡುವುದಕ್ಕಾಗಿ ನಾವು ಪ್ರತಿ ವರ್ಷ ಒಂದು ಸಮಿತಿಯನ್ನು ಮಾಡುತ್ತಿದ್ದೆವು. ಆದರೆ ಆ ಸಮಿತಿಯನ್ನು ಇನ್ನೂ ಮಾಡಿಲ್ಲ. ಆ ಸಮಿತಿಯಲ್ಲಿ ಒಬ್ಬ ರೈತ ಪ್ರತಿನಿಧಿಯನ್ನು ಸೇರಿಸಿದ್ದೇವೆ. ಆ ಸಮಿತಿಯನ್ನು ಈ ವರ್ಷ ಮಾಡುತ್ತೇವೆ.

ಶ್ರೀ ಬಿ. ಆರ್. ಪಾಟೀಲ್ .— ಸ್ವಾಮಿ, ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಒಂದು ಕ್ವಿಂಟಾಲ್ ಬೀಜಕ್ಕೆ ಸುಮಾರು 50-90 ರೂಪಾಯಿಗಳ ವ್ಯತ್ಯಾಸ ಇದೆ. ಆದ್ದರಿಂದ ನಾನು ಹೇಳುವುದೇನೆಂದರೆ, ಸರ್ಕಾರದವರು ಹೆಚ್ಚು ಲಾಭ ಇಟ್ಟುಕೊಳ್ಳದೆ ಕ್ವಿಂಟಾಲ್ ಮೇಲೆ 5ರಿಂದ 10 ರೂಪಾಯಿಗಳನ್ನು ಹೆಚ್ಚಿಗೆ ಕೊಡಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ .— ಸ್ವಾಮಿ ಇದರಲ್ಲಿ ಕಾಸ್ಟ್ ಆಫ್ ಪ್ರೊಕ್ಯೂರ್‌ಮೆಂಟ್ 1500 ರೂಪಾಯಿಗಳು ಆಗುತ್ತದೆ. ಉಳಿದಂತೆ ಪ್ರೊಸಸಿಂಗ್ ಚಾರ್ಜಸ್ ಗನ್ನಿ ಬ್ಯಾಗ್ ಚಾರ್ಜಸ್ ಆಡಳಿತ ವೆಚ್ಚ, ಸಾಗಾಣಿಕೆ ವೆಚ್ಚ, ಇನ್ನು ಇತರೆ ಖರ್ಚುಗಳೆಲ್ಲಾ ಸೇರಿ ಸುಮಾರು 2600 ರೂಪಾಯಿಗಳು ಆಗುತ್ತದೆ. ಆದರೆ ಅದರಲ್ಲಿ ನಾವು 100 ರೂಪಾಯಿಗಳು ಕಡಿಮೆ ಮಾಡಿ ಒಂದು ಕ್ವಿಂಟಾಲ್‌ಗೆ 2500 ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದೇವೆ.

ಶ್ರೀ ಎಂ. ಆರ್. ಪಾಟೀಲ್ . — ಸ್ವಾಮಿ, ಇವತ್ತು ನಮ್ಮ ಕರ್ನಾಟಕ ರಾಜ್ಯದಿಂದ ಎಷ್ಟು ಬೀಜ ಬರುತ್ತದೆ. ಆದೇ ಹೊರಗಡೆಯಿಂದ ಎಷ್ಟು ಬೀಜ ಬರುತ್ತದೆ. ಇದರಲ್ಲಿ ತಾವು ಹೊರಗಡೆ ಎಷ್ಟು ಬೀಜ ಮಾರಾಟ ಮಾಡುತ್ತೀರಿ ? ನಮ್ಮ ರಾಜ್ಯದಲ್ಲಿ ಎಷ್ಟು ಬೀಜ ಮಾರಾಟ ಮಾಡಿದ್ದೀರಿ ಎನ್ನುವ ಬಗ್ಗೆ ಅಂಕಿಅಂಶಗಳು ಇವೆಯಾ ?

ಅಧ್ಯಕ್ಷರು .— ಆ ಬಗ್ಗೆ ಈಗ ಹೆಚ್ಚಾಗಿ ವಿವರಣೆ ಕೊಡುವುದಕ್ಕಾಗುವುದಿಲ್ಲ. ಆ ಇಲಾಖೆ ಬಂದಾಗ ತಾವು ಬೇಕಾದರೆ ವಿವರವಾಗಿ ಚರ್ಚೆ ಮಾಡಬಹುದು.

ಶ್ರೀ ಎನ್. ಚಿಕ್ಕೇಗೌಡ .— ಸ್ವಾಮಿ, ಸರ್ಕಾರದವರು ಈ ನಿಗಮವನ್ನು ಸ್ಥಾಪನೆ ಮಾಡಿರುವುದು ರೈತರಿಗೆ ಒಳ್ಳೆಯ ಬೀಜವನ್ನು ಕೊಡಬೇಕು. ಆದರೂ ಕಡಿಮೆ ಬೆಲೆಯಲ್ಲಿ ಅಂದರೆ ನಿಗಮವು ಹೆಚ್ಚು ಲಾಭ ಇಟ್ಟುಕೊಳ್ಳದೆ ಬೀಜಗಳನ್ನು ಒದಗಿಸಿಕೊಡಬೇಕೆಂದು. ಆದರೂ ಕೂಡ ಈ ನಿಗಮದವರು ಹೆಚ್ಚು ಲಾಭ ಬಂದಿದೆಯೆಂದು ಹೇಳಿಕೊಂಡಿದ್ದಾರೆ. ಈ ರೀತಿ ಹೆಚ್ಚು ಲಾಭವಿಟ್ಟುಕೊಂಡು ಮಾರಾಟ ಮಾಡಿದರೆ ಇದರಿಂದ ರೈತರಿಗೆ ತೊಂದರೆಯಾಗುವುದಿಲ್ಲವೇ. ಇದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತಾರಾ ?

ಶ್ರೀ ಬಿ. ಎಲ್. ಗೌಡ .— ಸ್ವಾಮಿ, ಮಾಜಿ ಕೃಷಿ ಮಂತ್ರಿಗಳು ಕೊಟ್ಟಂತಹ ಸಲಹೆ ಬಹಳ ಉತ್ತಮವಾಗಿದೆ. ಅವರು ಕೊಟ್ಟಂತಹ ಸಲಹೆಯನ್ನು ಸರ್ಕಾರ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತದೆ.

ವಿಷಯ : ರಾಮದುರ್ಗಕ್ಕೆ ಕುಡಿಯುವ ನೀರಿನ ಒದಗಿಸುವಿಕೆ

ಪ್ರಶ್ನೆ : 184 (474) **ಶ್ರೀ ಎಫ್. ಎ. ಕೊಪ್ಪದ್** (ರಾಮದುರ್ಗ). — ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಗ್ರಾಮಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಮದುರ್ಗ ತಾಲ್ಲೂಕಿನ ಕಡಕೋಳ ಬಟಕುರ್ಕಿ ಹಾಗೂ ಹುಲ್ಲುಂಡ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜಿನ ಬಗ್ಗೆ ಅಂದಾಜನ್ನು ತಯಾರಿಸಲಾಗಿದ್ದು ಪ್ರತಿಯೊಂದು ಗ್ರಾಮದ ಬಗ್ಗೆಯೂ ಒಂದು ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ನಿಜವೆ ;

ಆ) ಹಾಗಿದ್ದಲ್ಲಿ ಇದುವರೆಗೂ ಕೆಲಸ ಪ್ರಾರಂಭಿಸದೇ ಇರುವುದಕ್ಕೆ ಕಾರಣಗಳೇನು ಮತ್ತು ನೀರಿಲ್ಲದೆ ತೊಂದರೆ ಪಡುತ್ತಿರುವುದರಿಂದ ಕುಡಿಯುವ ನೀರನ್ನು ಲಾರಿಗಳಲ್ಲಿಯಾದರೂ ಸರಬರಾಜು ಮಾಡಲು ಸರಕಾರದವರು ಕ್ರಮ ಕೈಕೊಳ್ಳುವರೇ?

ಉತ್ತರ : ಶ್ರೀ ಅಬ್ದುಲ್ ನಜೀರ್ ಸಾಬ್ : (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಅ) ಈ ಮೂರು ಗ್ರಾಮಗಳಿಗೆ ತಲಾ ಒಂದು ಸಾವಿರ ದಂತೆ 1983–84ರ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವುದು ನಿಜ.

1) **ಹುಲ್ಲುಂಡ** :— ಈ ಗ್ರಾಮದಲ್ಲಿ ಎರಡು ಕೊಳವೆ ಬಾವಿಗಳನ್ನು ಕೊರೆದಿದ್ದು ಪೈಪ್ ಲೈನನ್ನು ಗ್ರಾಮದವರಿಗೂ ಮುಟ್ಟಿಸಿದ್ದು ಹೆಚ್ಚಿನ ಸಬ್ ಮರ್ಶಿಬಲ್ ಪಂಪನ್ನು ಕೊಡ್ರಿಸಿದ್ದು ಗ್ರಾಮಕ್ಕೆ ನೀರು ಪೂರೈಸಲಾಗುವುದು. ಈ ಯೋಜನೆಗೆ ಹೆಚ್ಚಿನ ಹಣವನ್ನು ಒದಗಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

2) **ಕಟಕೋಳ** :— ಈ ಗ್ರಾಮದ ಜನತಾ ಕಾಲೋನಿಯಲ್ಲಿ ತೆಗೆದ ಕೊಳವೆ ಬಾವಿಯಲ್ಲಿ ಸಬ್ ಮರ್ಶಿಬಲ್ ಪಂಪು ಕೂಡ್ರಿಸಿದ್ದು ಹತ್ತಿರದಲ್ಲಿ ಎರಡು ನೀರಿನ ಕಬ್ಬಿಣ ಟ್ಯಾಂಕುಗಳಿಂದ ನೀರನ್ನು ಪೂರೈಸಲಾಗುತ್ತಿದೆ. ಆದರೆ ಈ ಗ್ರಾಮದ ಜನಸಂಖ್ಯೆಯು ಹೆಚ್ಚಳವಿರುವುದರಿಂದ ನೀರಿನ ಅಭಾವ ತಪ್ಪಿಸಲು ಅಭಿವೃದ್ಧಿ ಯೋಜನೆಯ ಅವಶ್ಯಕತೆ ಇರುತ್ತದೆ. ಈ ಯೋಜನೆಗೆ ಸಾಕಷ್ಟು ಹಣವನ್ನು ಒದಗಿಸುವ ವಿಚಾರ ಸರಕಾರದ ಪರಿಶೀಲನೆಯಲ್ಲಿದೆ.

3 **ಬಟಕುರ್ಕಿ** :— ಈ ಯೋಜನೆಯ ಅಂದಾಜು ಮತ್ತು ನಕ್ಷೆ ಪಟ್ಟಿ ತಯಾರಿಕೆಯು ಅಂತಿಮ